Akashvani : Bangalore

National Bulletin In Kannada

ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

14.01.2025 19.35 hrs

<><*<><>*><>

<u>ಮುಖ್ಯಾಂಶಗಳು</u>

- ಮಹಾಕುಂಭ ಮೇಳದ ಮೊದಲ ಪವಿತ್ರ ಸ್ನಾನದಲ್ಲಿ ೩ ಕೋಟಿ ೫೦ ಲಕ್ಷಕ್ಕೂ ಹೆಚ್ಚು ಭಕ್ತಾಧಿಗಳು ಭಾಗಿ, ಪ್ರಧಾನಿ ಶ್ಲಾಘನೆ
- ಪಾಕ್ ಆಕ್ರಮಿತ ಕಾಶ್ಮೀರವಿಲ್ಲದೇ ಜಮ್ಮು-ಕಾಶ್ಮೀರ ಅಪೂರ್ಣ: ಕೇಂದ್ರ ರಕ್ಷಣಾ ಸಚಿವ ರಾಜನಾಥ್ ಸಿಂಗ್
- ಐಸಿಸಿ ಡಿಸೆಂಬರ್ ತಿಂಗಳ ಆಟಗಾರ ಪ್ರಶಸ್ತಿ, ಭಾರತದ ಜಸ್ಪ್ರೀತ್ ಬುಮ್ರಾ ಮತ್ತು ಆಸ್ಟ್ರೇಲಿಯಾದ ಅನ್ನಾಬೆಲ್ ಸುದರ್ಲ್ಯಾಂಡ್ ಆಯ್ಕೆ
- ಖೋ ಖೋ ವಿಶ್ವಕಪ್-೨೦೨೫; ಇಂದಿನ ಕಣದಲ್ಲಿ ಭಾರತ ಪುರುಷ ಮತ್ತು ಮಹಿಳಾ ತಂಡಗಳು

<><*<><>*><>

ಮಕರ ಸಂಕ್ರಾಂತಿ ಹಬ್ಬದ ಪ್ರಯುಕ್ತ ಮಹಾಕುಂಭ ಮೇಳದಲ್ಲಿ ನಡೆದ ಮೊದಲ ಅಮೃತ ಸ್ನಾನದಲ್ಲಿ ಭಾಗಿಯಾದ ಭಕ್ತರನ್ನು ಪ್ರಧಾನಮಂತ್ರಿ ನರೇಂದ್ರ ಮೋದಿ ಶ್ಲಾಘಿಸಿದರು. ಉತ್ತರ ಪ್ರದೇಶದ ಪ್ರಯಾಗ್ ರಾಜ್ ನಲ್ಲಿ ನಡೆಯುತ್ತಿರುವ ಮಹಾಕುಂಭ ಮೇಳದಲ್ಲಿ ೧೩ ಅಖಾಡಗಳಲ್ಲಿ ಅಮೃತ ಸ್ನಾನ ನಡೆಯುತ್ತಿದ್ದು, ತ್ರಿವೇಣಿ ಸಂಗಮದಲ್ಲಿ ಮಹಾನಿರ್ವಾಣಿ ಪಂಚಾಯತ್ ಅಖಾಡದಲ್ಲಿ ಹಮ್ಮಿಕೊಳ್ಳಲಾಗಿದ್ದ ಮೊದಲ ಪವಿತ್ರ ಸ್ನಾನದಲ್ಲಿ ಇಂದು ಸುಮಾರು ೩ ಕೋಟಿ ೫೦ ಲಕ್ಷಕ್ಕೂ ಹೆಚ್ಚು ಭಕ್ತಾದಿಗಳು ಪುಣ್ಯ ಸ್ನಾನ ಮಾಡಿದರು. ಪವಿತ್ರ ಸ್ನಾನದ ನಂತರ, ಭಕ್ತರು ಘಾಟ್‌ಗಳಲ್ಲಿ ಧಾರ್ಮಿಕ ವಿಧಿವಿಧಾನಗಳನ್ನು ನೆರವೇರಿಸಿ, ಪ್ರಾರ್ಥನೆ ಸಲ್ಲಿಸಿದರು. ಹಬ್ಬದ ಪಾವಿತ್ರ್ಯವನ್ನು ಹೆಚ್ಚಿಸುವ ದಾನ ಕಾರ್ಯಗಳಲ್ಲಿಯೂ ಭಕ್ತಾದಿಗಳು ತೊಡಗಿದ್ದರು.

<><*<><>*><>

ನೀತಿ-ನಿರ್ಧಾರಗಳಿಗೆ ಪ್ರಾಯೋಗಿಕ ಅಡಿಪಾಯವನ್ನು ಒದಗಿಸುವ ಮೂಲಕ ಪರಿಣಾಮಕಾರಿ ಆಡಳಿತದಲ್ಲಿ ಸಂಖ್ಯಾಶಾಸ್ತ್ರೀಯ ಉಪಕರಣಗಳು ಮತ್ತು ಪರಿಮಾಣಾತ್ಮಕ ತಂತ್ರಗಳು ಮಹತ್ವದ ಪಾತ್ರವನ್ನು ವಹಿಸುತ್ತವೆ ಎಂದು ರಾಷ್ಟ್ರಪತಿ ದ್ರೌಪದಿ ಮುರ್ಮು ಹೇಳಿದರು. ರಾಷ್ಟ್ರಪತಿ ಭವನದಲ್ಲಿ ಇಂದು ಭಾರತೀಯ ಅಂಕಿ-ಅಂಶ ಸೇವೆಯ ಪ್ರಶಿಕ್ಷಣಾರ್ಥಿಗಳನ್ನು ಉದ್ದೇಶಿಸಿ ಅವರು ಮಾತನಾಡಿದರು. ಆರೋಗ್ಯ, ಶಿಕ್ಷಣ, ಜನಸಂಖ್ಯೆಯ ಗಾತ್ರ ಮತ್ತು ಉದ್ಯೋಗದ ಕುರಿತು ಅಂಕಿ-ಅಂಶವನ್ನು ಸಂಗ್ರಹಿಸಲು ಸರ್ಕಾರಗಳು ಪ್ರಮುಖವಾಗಿ ರಾಷ್ಟ್ರೀಯ ಅಂಕಿ-ಅಂಶಗಳ ವ್ಯವಸ್ಥೆಯನ್ನು ಅವಲಂಬಿಸಿವೆ, ಇದು ನೀತಿ ರೂಪಿಸುವುದಕ್ಕೆ ಪ್ರಮುಖ ಆಧಾರವಾಗಿದೆ ಎಂದು ಅವರು ಒತ್ತಿ ಹೇಳಿದರು. ಸಂಖ್ಯಾಶಾಸ್ತ್ರೀಯ ವಿಶ್ಲೇಷಣೆಯು ಆಡಳಿತದಲ್ಲಿ ಪಾರದರ್ಶಕತೆ ಮತ್ತು ಹೊಣೆಗಾರಿಕೆಯನ್ನು ತರಲು ಪ್ರಮುಖ ಸಾಧನವಾಗಿದೆ ಎಂದು ರಾಷ್ಟ್ರಪತಿ ದ್ರೌಪದಿ ಮುರ್ಮು ತಿಳಿಸಿದರು. ಅಂಕಿ-ಅಂಶಗಳು ಸಮರ್ಥ ಆಡಳಿತದ ಬೆನ್ನೆಲುಬು ಮಾತ್ರವಲ್ಲದೇ, ಸಾಮಾಜಿಕ-ಆರ್ಥಿಕ ಅಭಿವೃದ್ಧಿಯ ಸಾಧನವಾಗಿವೆ ಎಂದರು. ನೀತಿಗಳನ್ನು ರೂಪಿಸುವುದು, ಜಾರಿಗೊಳಿಸುವುದು, ಪರಿವೀಕ್ಷಿಸುವುದು ಮಾತ್ರವಲ್ಲದೇ, ನೀತಿ ಪರಿಶೀಲನೆ ಹಾಗೂ ಪರಿಣಾಮವನ್ನು ಅಂದಾಜಿಸಲು ಕೂಡ ಸರ್ಕಾರಕ್ಕೆ ದತ್ತಾಂಶದ ಅಗತ್ಯವಿದೆ ಎಂದು ರಾಷ್ಟ್ರಪತಿ ದ್ರೌಪದಿ ಮುರ್ಮು ಹೇಳಿದರು. ಸರ್ಕಾರದ ಯೋಜನೆಗಳು ಮತ್ತು ಕಾರ್ಯಕ್ರಮಗಳ ಬಗೆಗಿನ ತಿಳಿವಳಿಕೆ ಮತ್ತು ಮೌಲ್ಯಮಾಪನಕ್ಕಾಗಿ ನಾಗರಿಕರಿಗೂ ಅಂಕಿ-ಅಂಶಗಳ ಅಗತ್ಯವಿದೆ ಎಂದು ಹೇಳಿದರು.

<><*<><>*><>

ಪಾಕ್ ಆಕ್ರಮಿತ ಕಾಶ್ಮೀರವಿಲ್ಲದೇ ಜಮ್ಮು-ಕಾಶ್ಮೀರ ಅಪೂರ್ಣ, ಪಾಕ್ ಆಕ್ರಮಿತ ಕಾಶ್ಮೀರದಲ್ಲಿರುವ ಜನರನ್ನು ಧರ್ಮದ ಆಧಾರದಲ್ಲಿ ತಾರತಮ್ಯ ಮಾಡಲಾಗುತ್ತಿದೆ ಎಂದು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಹೇಳಿದ್ದಾರೆ. ಜಮ್ಮುವಿನ ಹೊರವಲಯದಲ್ಲಿ ಅಖ್ನೂರ್ ಪ್ರದೇಶದಲ್ಲಿ ಇಂದು ಸೇನೆ ಆಯೋಜಿಸಿದ್ದ ಮಾಜಿ ಸೈನಿಕರ ರ್‍ಯಾಲಿ ಉದ್ದೇಶಿಸಿ ಮಾತನಾಡಿದ ರಕ್ಷಣಾ ಸಚಿವರು, ಪಾಕ್ ಆಕ್ರಮಿತ ಕಾಶ್ಮೀರದಲ್ಲಿ ಸಕ್ರಿಯ ಲಾಂಚಿಂಗ್ ಪ್ಯಾಡ್‌ಗಳಿದ್ದು, ಭಾರತ ಸಕಾಲದಲ್ಲಿ ಕ್ರಮ ಕೈಗೊಳ್ಳಲಿದೆ ಎಂದರು. ದೇಶವನ್ನು ರಕ್ಷಿಸಲು ನಡೆದ ಯುದ್ಧಗಳ ವೇಳೆ ಭಾರತೀಯ ಶೂರ

ಸೈನಿಕರು ಯಾವಾಗಲೂ ಶತೃಗಳನ್ನು ಪರಾಭವಗೊಳಿಸುತ್ತಾ ಬಂದಿದ್ದಾರೆ. ಭಯೋತ್ಪಾದನೆ ವಿರುದ್ಧ ರಾಷ್ಟ್ರ ರಕ್ಷಣೆಯಲ್ಲಿ ಸೇನಾ ಯೋಧರ ತ್ಯಾಗವನ್ನು, ಪಾತ್ರವನ್ನು ರಕ್ಷಣಾ ಸಚಿವರು ಶ್ಲಾಘಿಸಿದರು.

ಧ್ವನಿ; ರಾಜನಾಥ್ ಸಿಂಗ್, ರಕ್ಷಣಾ ಸಚಿವ

ರಕ್ಷಣಾ ಸಚಿವರು, ೧೦೮ ಅಡಿ ರಾಷ್ಟ್ರ ಧ್ವಜವನ್ನು ಹಾರಿಸಿ ಅಖ್ನೂರ್‌ಲ್ಲಿ ಪಾರಂಪರಿಕ ಸಂಗ್ರಹಾಲಯವನ್ನು ಉದ್ಘಾಟಿಸಿದರು. ಈ ಸಂಗ್ರಹಾಲಯದಲ್ಲಿ ಜಮ್ಮು ಮತ್ತು ಕಾಶ್ಮೀರದಲ್ಲಿ ವಿವಿಧ ಸಮರಗಳಲ್ಲಿ ಬಳಸಲಾಗಿದ್ದ ಶಸ್ತ್ರಾಸ್ತ್ರಗಳನ್ನು ಪ್ರದರ್ಶಿಸಲಾಗಿದೆ. ಇದಕ್ಕೂ ಮುನ್ನ ರಕ್ಷಣಾ ಸಚಿವರನ್ನು ಲೆಫ್ಟಿನೆಂಟ್ ಗೌರ್ನರ್ ಮನೋಜ್ ಸಿನ್ಹಾ, ಮುಖ್ಯಮಂತ್ರಿ ಓಮರ್ ಅಬ್ದುಲ್ಲಾ ಮತ್ತು ಹಿರಿಯ ಅಧಿಕಾರಿಗಳು ಬರಮಾಡಿಕೊಂಡರು.

<><*<><>*><>

ಹೆಚ್ಚುತ್ತಿರುವ ಜಾಗತಿಕ ಸ್ಥಾನಮಾನ ಮತ್ತು ಸವಾಲಿನ ಸಮಯದಲ್ಲಿ ಅರ್ಥಪೂರ್ಣ ಸಹಕಾರ ನೀಡುವಾಗ ಧೃವೀಕೃತ ಜಗತ್ತನ್ನು ನಾವಿಗೇಟ್ ಮಾಡುವ ಭಾರತದ ವಿಶಿಷ್ಟ ಸಾಮರ್ಥ್ಯವನ್ನು ವಿದೇಶಾಂಗ ಸಚಿವ ಡಾ.ಎಸ್.ಜೈಶಂಕರ್ ಒತ್ತಿ ಹೇಳಿದ್ದಾರೆ. ಸ್ಪೇನ್‌ನಲ್ಲಿರುವ ಭಾರತೀಯ ವಲಸಿಗರನ್ನು ಉದ್ದೇಶಿಸಿ ಮಾತನಾಡಿದ ಸಚಿವರು, ಜಾಗತಿಕ ವೇದಿಕೆಯಲ್ಲಿ ಭಾರತದ 'ಸಬ್ ಕಾ ಸಾಥ್, ಸಬ್ ಕಾ ವಿಕಾಸ್, ಸಬ್ ಕಾ ವಿಶ್ವಾಸ್' ಕಾರ್ಯವಿಧಾನವನ್ನು ಒತ್ತಿ ಹೇಳಿದರು.

ಧ್ವನಿ: ಜೈಶಂಕರ್, ಕೇಂದ್ರ ಸಚಿವ

ರಷ್ಯಾ ಮತ್ತು ಉಕ್ರೇನ್ ಅಥವಾ ಇಸ್ರೇಲ್ ಮತ್ತು ಇರಾನ್ ರಾಷ್ಟ್ರಗಳೊಂದಿಗೆ ಮಾತನಾಡುವ ಸ್ಥಿತಿಯಲ್ಲಿ ಕೆಲವೇ ದೇಶಗಳಿವೆ. ಆದರೆ, ಪ್ರಧಾನಿ ನರೇಂದ್ರ ಮೋದಿ ಎರಡೂ ರಾಷ್ಟ್ರಗಳೊಂದಿಗೆ ಮಾತನಾಡುವ ಸಾಮರ್ಥ್ಯ ಹೊಂದಿದ್ದಾರೆ. ಅದೇ ರೀತಿ ಕೆಲವೇ ದೇಶಗಳು ಏಕಕಾಲದಲ್ಲಿ ಕ್ವಾಡ್ ಮತ್ತು ಬ್ರಿಕ್ಸ್‌ನ ಸದಸ್ಯರಾಗಬಹುದು ಎಂದ ಸಚಿವ ಡಾ.ಎಸ್.ಜೈಶಂಕರ್ ಹೇಳಿದರು. ಭಾರತ-ಸ್ಪೇನ್ ಸಂಬಂಧಗಳ ಬಗ್ಗೆ ಆಶಾವಾದವನ್ನು ವ್ಯಕ್ತಪಡಿಸಿದ ವಿದೇಶಾಂಗ ಸಚಿವರು, ಎರಡೂ ದೇಶಗಳ ನಡುವಿನ ಬಾಂಧವ್ಯ ಗಣನೀಯವಾಗಿ ಅಭಿವೃದ್ಧಿ ಹೊಂದುತ್ತಿದೆ ಎಂದು ತಿಳಿಸಿದರು.

<><*<><>*><>

ವಾಣಿಜ್ಯ ಮತ್ತು ಕೈಗಾರಿಕೆ ಸಚಿವ ಪಿಯೂಷ್ ಗೋಯಲ್ ನವದೆಹಲ್ಲಿಯಲ್ಲಿಂದು ರಾಷ್ಟ್ರೀಯ ಅರಿಶಿಣ ಮಂಡಳಿಯನ್ನು ವರ್ಚುವಲ್ ಮೂಲಕ ಉದ್ಘಾಟಿಸಿದರು. ಅರಿಶಿನ ಬೆಳೆಯುವ ರೈತರ ಕಲ್ಯಾಣ, ಉತ್ಕೃಷ್ಟ ಅರಿಶಿನ ತಳಿ ಅಭಿವೃದ್ಧಿಪಡಿಸುವಿಕೆ ಮತ್ತು ರಫ್ತು ಉತ್ತೇಜನದತ್ತ ಮಂಡಳಿಯು ಗಮನ ಹರಿಸುತ್ತದೆ ಎಂದು ತಮ್ಮ ಉದ್ಘಾಟನಾ ಭಾಷಣದಲ್ಲಿ ಸಚಿವರು ತಿಳಿಸಿದರು.

ಧ್ವನಿ: ಪಿಯೂಷ್ ಗೋಯಲ್

ವಿಶ್ವದ ಶೇಕಡಾ.೭೦ ರಷ್ಟು ಅರಶಿಣವನ್ನು ಭಾರತದಲ್ಲಿ ಬೆಳೆಯಲಾಗುತ್ತಿದ್ದು, ದೇಶದ ೨೦ ರಾಜ್ಯಗಳಲ್ಲಿ ರೈತರು ಅರಿಶಿಣ ಕೃಷಿಯಲ್ಲಿ ನಿರತರಾಗಿದ್ದಾರೆ. ಅರಿಶಿಣ ಕೃಷಿಯ ಸಂಶೋಧನೆ, ಮೌಲ್ಯವರ್ಧಿತ ಉತ್ಪನ್ನ, ಮೂಲಸೌಕರ್ಯ ಅಭಿವೃದ್ಧಿ, ಉತ್ಪಾದಕತೆ ಮತ್ತು ರಫ್ತು ಹೆಚ್ಚಿಸುವ ಕ್ರಮಗಳ ಕುರಿತು ಮಂಡಳಿಯು ಗಮನಹರಿಸಲಿದೆ ಎಂದು ಅವರು ಹೇಳಿದರು. ದೇಶದಲ್ಲಿ ೩೦ ವಿಧದ ಅರಿಶಿಣ ತಳಿಗಳಿದ್ದು, ಅದರಲ್ಲಿ ಹಲವು ಜಿಐ ಟ್ಯಾಗ್ ಸಹ ಪಡೆದಿವೆ ಸಚಿವರು ಮಾಹಿತಿ ನೀಡಿದರು. ರಾಷ್ಟ್ರೀಯ ಅರಿಶಿಣ ಮಂಡಳಿಯು, ಅರಿಶಿಣದ ಅಗತ್ಯ ಮತ್ತು ಔಷಧೀಯ ಗುಣಗಳು, ಅದರ ಇಳುವರಿ ಹೆಚ್ಚಿಸುವ ಮಾರ್ಗಗಳು ಮತ್ತು ಹೊಸ ಮಾರುಕಟ್ಟೆಗಳಿಗೆ ವ್ಯಾಪಾರವನ್ನು ಉತ್ತೇಜಿಸಲು ಲಾಜಿಸ್ಟಿಕ್ಸ್ ಮತ್ತು ಪೂರೈಕೆ ಸರಪಳಿಯನ್ನು ಹೆಚ್ಚಿಸುವ ಮಾರ್ಗಗಳ ಕುರಿತು ಜಾಗೃತಿ ಮೂಡಿಸಲು ಸಹ ಪರಿಶೀಲಿಸುತ್ತದೆ ಎಂದು ಸಚಿವ ಗೋಯಲ್ ಹೇಳಿದರು.

ಪ್ರಧಾನಿ ನರೇಂದ್ರ ಮೋದಿ ಮಂಡಳಿಯ ಸ್ಥಾಪನೆಯನ್ನು ಶ್ಲಾಘಿಸಿ, ಸಾಮಾಜಿಕ ಮಾಧ್ಯಮದ ಪೋಸ್ಟ್ ಮೂಲಕ ಸಂತಸ ಹಂಚಿಕೊಂಡಿದ್ದಾರೆ.

<><*<><>*><>

ದೇಶದಲ್ಲಿ ಕಲ್ಲಿದ್ದಲು ಆಮದು ಕಳೆದ ವರ್ಷ ಏಪ್ರಿಲ್‌ನಿಂದ ಅಕ್ಟೋಬರ್‌ವರೆಗಿನ ಅವಧಿಯಲ್ಲಿ ಶೇಕಡ ೩ ರಷ್ಟು ಕುಸಿದಿದೆ. ಅದರ ಹಿಂದಿನ ವರ್ಷದಲ್ಲಿ ಇದೇ ಅವಧಿಯಲ್ಲಿ ೧೫೪ ದಶಲಕ್ಷ ಟನ್‌ಗಳಿಷ್ಟಿದ್ದ ಆಮದು ಪ್ರಮಾಣ ೧೪೯ ದಶಲಕ್ಷ ಟನ್‌ಗೆ ಇಳಿದಿದೆ. ದೇಶದಲ್ಲಿ ಕ್ಷಿಪ್ರಗತಿಯಿಂದ ಬೆಳೆಯುತ್ತಿರುವ ಆರ್ಥಿಕತೆಯು ಬೆಂಬಲಿಸುವಲ್ಲಿ ಭಾರತದ

ಕಲ್ಲಿದ್ದಲು ವಲಯ ನಿರ್ಣಾಯಕ ಪಾತ್ರ ವಹಿಸುತ್ತದೆ ಎಂದು ಕಲ್ಲಿದ್ದಲು ಸಚಿವಾಲಯ ಹೇಳಿದೆ. ದೇಶೀಯ ಗಣಿಗಳಿಂದ ವಿಶೇಷವಾಗಿ ಉತ್ತಮ ಶ್ರೇಣಿಯ ಉಷ್ಣ ಕಲ್ಲಿದ್ದಲು ಸಾಕಷ್ಟು ಲಭ್ಯವಿಲ್ಲದ ಕಾರಣ, ಕಲ್ಲಿದ್ದಲು ಬೇಡಿಕೆ ಪೂರೈಕೆಯಲ್ಲಿ ಗಣನೀಯ ಅಂತರವನ್ನು ದೇಶ ಎದುರಿಸುತ್ತಿದೆ ಎಂದು ಸಚಿವಾಲಯ ತಿಳಿಸಿದೆ. ಇದರ ಪರಿಣಾಮ ಉಕ್ಕು ಉತ್ಪಾದನೆಯಂತಹ ನಿರ್ಣಾಯಕ ಕೈಗಾರಿಕೆಗಳನ್ನು ಬೆಂಬಲಿಸಲು ಕಲ್ಲಿದ್ದಲು ಆಮದು ಬಹಳ ಅಗತ್ಯವಾಗಿದೆ. ದೇಶೀಯ ಉತ್ಪಾದನೆಯನ್ನು ಹೆಚ್ಚಿಸಲು ಮತ್ತು ಸ್ಥಿರ ಕಲ್ಲಿದ್ದಲು ಪೂರೈಕೆಯನ್ನು ಖಾತರಿಪಡಿಸಲು ಸರ್ಕಾರ ಹಲವು ವ್ಯೂಹಾತ್ಮಕ ಕ್ರಮಗಳನ್ನು ಜಾರಿಗೊಳಿಸುತ್ತಿದೆ ಎಂದು ಸಚಿವಾಲಯ ತಿಳಿಸಿದೆ. ಈ ಪ್ರಯತ್ನಗಳು ಕಲ್ಲಿದ್ದಲು ಆಮದಿನ ಮೇಲೆ ಭಾರತದ ಅವಲಂಬನೆಯನ್ನು ಕಡಿಮೆ ಮಾಡುವುದು ಮಾತ್ರವಲ್ಲದೇ ದೇಶದ ಇಂಧನ ಭದ್ರತೆಯನ್ನು ಹೆಚ್ಚಿಸುವ ಉದ್ದೇಶ ಹೊಂದಿವೆ.

<><*<><>*><>

ಪಶ್ಚಿಮ ಅಮೆರಿಕಾದ ಲಾಸ್ ಏಂಜೆಲ್ಸ್‌ನಲ್ಲಿ ಸಂಭವಿಸಿರುವ ಭೀಕರ ಕಾಡ್ಗಿಚ್ಚಿನಿಂದಾಗಿ ಸುಮಾರು ೯೨ ಸಾವಿರಕ್ಕೂ ಹೆಚ್ಚು ಜನರನ್ನು ಕಡ್ಡಾಯವಾಗಿ ಸ್ಥಳಾಂತರಿಸಲಾಗಿದ್ದು, ಇನ್ನು ೮೯ ಸಾವಿರ ಜನರನ್ನು ಸ್ಥಳಾಂತರಗೊಳಿಸಬೇಕೆಂದು ಎಚ್ಚರಿಕೆ ನೀಡಲಾಗಿದೆ. ಪ್ರದೇಶದಾದ್ಯಂತ ಹಬ್ಬುತ್ತಿರುವ ಕಾಡ್ಗಿಚ್ಚಿನಿಂದ ಕನಿಷ್ಠ ೨೫ ಮಂದಿ ಮೃತಪಟ್ಟಿದ್ದು, ಹಲವು ಕಾಣೆಯಾಗಿದ್ದಾರೆ. ಈ ಭೀಕರ ಕಾಡ್ಗಿಚ್ಚಿಗೆ ಸುಮಾರು ೪೦ ಸಾವಿರದ ೫೦೦ ಎಕರೆ ಪ್ರದೇಶಗಳು ಸುಟ್ಟು ಹೋಗಿ, ೧೨ ಸಾವಿರದ ೩೦೦ ಕಟ್ಟಡಗಳು  ಹಾನಿಗೊಳಗಾಗಿವೆ. ಕ್ಯಾಲಿಫೋರ್ನಿಯಾದಲ್ಲಿ ೮೦ ಸಾವಿರಕ್ಕೂ ಹೆಚ್ಚು ಮನೆಗಳಲ್ಲಿ ವಿದ್ಯುತ್ ಸಂಪರ್ಕ ಕಡಿತಗೊಂಡಿದೆ.

<><*<><>*><>

ಭಾರತದ ವೇಗಿ ಜಸ್ಪ್ರೀತ್ ಬುಮ್ರಾ ಮತ್ತು ಆಸ್ಟ್ರೇಲಿಯಾದ ಆಲ್‌ರೌಂಡರ್ ಅನ್ನಾಬೆಲ್ ಸುದರ್ಲ್ಯಾಂಡ್ ಅವರನ್ನು ಇಂದು ಕ್ರಮವಾಗಿ ಡಿಸೆಂಬರ್ ತಿಂಗಳ ಐಸಿಸಿ ಪುರುಷ ಮತ್ತು ಮಹಿಳಾ ಆಟಗಾರರನ್ನಾಗಿ ಆಯ್ಕೆ ಮಾಡಲಾಗಿದೆ.

<><*<><>*><>

ಖೋ ಖೋ ವಿಶ್ವಕಪ್-೨೦೨೫ ಪಂದ್ಯಾವಳಿಯಲ್ಲಿ ನವದೆಹಲಿಯ ಇಂದಿರಾ ಗಾಂಧಿ ಒಳಾಂಗಣ ಕ್ರೀಡಾಂಗಣದಲ್ಲಿ ಇಂದು ಭಾರತ ಮಹಿಳಾ ತಂಡವು, ತಮ್ಮ ಆರಂಭಿಕ ಪಂದ್ಯದಲ್ಲಿ ದಕ್ಷಿಣ ಕೊರಿಯಾ ವಿರುದ್ಧ ಸೆಣಸಲಿದೆ.ಪ್ರಿಯಾಂಕ್ ಇಂಗ್ಲೆ ನೇತೃತ್ವದ ತಂಡವು, ತಮ್ಮ ಅಭಿಯಾನವನ್ನು ಗೆಲುವಿನ ಮೂಲಕ ಆರಂಭಿಸುವ ವಿಶ್ವಾಸದಲ್ಲಿದ್ದಾರೆ.

<><*<> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <>*><>

<><*<>ನಮ್ಮ ಮುಂದಿನ ವಾರ್ತಾ ಪ್ರಸಾರ ನಾಳೆ ಬೆಳಗ್ಗೆ ೭.೦೫ ಕ್ಕೆ <>*><>